**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**

(ವಿಶೇಷ ಸಂಚಿಕೆ)

**भाग IX अनुभाग 1**

**PART IX SECTION 1**

ಭಾಗ **IX** ವಿಭಾಗ **1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | | |
|---|---|---|---|
| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |


**Ministry of Law, Justice & Company Affairs**

(Legislative Department)

New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಪರಿಸರ (ಸಂರಕ್ಷಣೆ) ಅಧಿನಿಯಮ, 1986

## (1986ರ ಅಧಿನಿಯಮ ಸಂಖ್ಯೆ 29)

[23ನೇ ಮೇ, 1986.]

ಪರಿಸರ ಸಂರಕ್ಷಣೆ ಮತ್ತು ಸುಧಾರಣೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತವು ಭಾಗವಹಿಸಿದ್ದಂಥ 1972ರ ಜೂನ್ ನಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಮಾನವ ಪರಿಸರದ ಬಗ್ಗೆ ಸಂಯುಕ್ತ ರಾಷ್ಟ್ರಗಳ ಸಮ್ಮೇಳನದಲ್ಲಿ, ಮಾನವ ಪರಿಸರದ ಸಂರಕ್ಷಣೆ ಮತ್ತು ಸುಧಾರಣೆಗಾಗಿ ಸಮುಚಿತ ಕ್ರಮಗಳನ್ನು ತೆಗೆದುಕೊಳ್ಳಲು ತೀರ್ಮಾನಿಸಿರುವುದರಿಂದ;

ಅಲ್ಲದೆ, ಹಿಂದೆ ಹೇಳಿದ ತೀರ್ಮಾನಗಳನ್ನು, ಪರಿಸರ ಸಂರಕ್ಷಣೆ ಮತ್ತು ಸುಧಾರಣೆ ಮತ್ತು ಮನುಷ್ಯರು ಮತ್ತು ಇತರ ಜೀವಿಗಳು, ಸಸ್ಯಗಳು ಮತ್ತು ಸ್ವತ್ತುಗಳಿಗೆ ಉಂಟಾಗುವ ಅಪಾಯವನ್ನು ತಡೆಗಟ್ಟುವುದಕ್ಕೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಕಾರ್ಯಗತಗೊಳಿಸುವುದು ಅವಶ್ಯವೆಂದು ಪರ್ಯಾಲೋಚಿಸಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಪರಿಸರ (ಸಂರಕ್ಷಣೆ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ

---

* ನವೆಂಬರ್ 19, 1986, ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್ 1198 (ಇ), ದಿನಾಂಕ: 12ನೇ ನವೆಂಬರ್, 1986. ಭಾರತ ವಿಶೇಷ ರಾಜಪತ್ರ, ಭಾಗ II, ವಿಭಾಗ 3(i) ನೋಡಿ.

ಬೇರೆ ಉಪಬಂಧಗಳಿಗಾಗಿ ಮತ್ತು ಬೇರೆಬೇರೆ ಪ್ರದೇಶಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪರಿಸರ" ಎಂಬುದು ನೀರು, ಗಾಳಿ ಮತ್ತು ಭೂಮಿ ಹಾಗೂ ನೀರು, ಗಾಳಿ ಮತ್ತು ಭೂಮಿ ಮತ್ತು ಮನುಷ್ಯರು, ಇತರ ಜೀವಿಗಳು, ಸಸ್ಯಗಳು, ಸೂಕ್ಷ್ಮಾಣು ಜೀವಿ ಮತ್ತು ಸ್ವತ್ತು ಇವುಗಳೊಳಗೆ ಮತ್ತು ಇವುಗಳ ನಡುವೆ ಇರುವಂಥ ಸಂಬಂಧವನ್ನು ಒಳಗೊಂಡಿರುತ್ತದೆ;

(ಬಿ) "ಪರಿಸರ ಮಾಲಿನ್ಯಕಾರಕ" ಎಂದರೆ, ಪರಿಸರಕ್ಕೆ ಹಾನಿಕಾರಕವಾಗಬಹುದಾದ ಅಥವಾ ಹಾನಿಕಾರಕ ಪ್ರವೃತ್ತಿಯನ್ನು ಹೊಂದಿರುವ ಸಾಂದ್ರತೆಯಲ್ಲಿನ ಯಾವುದೇ ಘನ, ದ್ರವ ಅಥವಾ ಅನಿಲ ರೂಪದ ಯಾವುದೇ ವಸ್ತು;

(ಸಿ) "ಪರಿಸರ ಮಾಲಿನ್ಯ" ಎಂದರೆ, ಯಾವುದೇ ಪರಿಸರ ಮಲಿನಕಾರಿಯ ಹೆಸರಿನಲ್ಲಿ ಇರುವುದು;

(ಡಿ) ಯಾವುದೇ ವಸ್ತುವಿಗೆ ಸಂಬಂಧಪಟ್ಟಂತೆ "ನಿರ್ವಹಣೆ" ಎಂದರೆ, ಅಂಥ ವಸ್ತುವಿನ ತಯಾರಿಕೆ, ಪರಿಷ್ಕರಣೆ, ಸಂಸ್ಕರಣೆ, ಪ್ಯಾಕ್ ಮಾಡುವುದು, ದಾಸ್ತಾನು, ಸಾಗಾಣಿಕೆ, ಬಳಕೆ, ಸಂಗ್ರಹಣೆ, ನಾಶಪಡಿಸುವಿಕೆ, ಪರಿವರ್ತನೆ, ಮಾರಾಟ, ವರ್ಗಾವಣೆ ಅಥವಾ ಅಂಥದ್ದಕ್ಕಾಗಿ ಕೊಡಮಾಡುವುದು;

(ಇ) "ಅಪಾಯಕಾರಿ ವಸ್ತು" ಎಂದರೆ, ರಾಸಾಯನಿಕ ಅಥವಾ ಭೌತರಾಸಾಯನಿಕ ಗುಣಗಳಿಂದಾಗಿ ಅಥವಾ ನಿರ್ವಹಣೆಗಳಿಂದಾಗಿ ಮನುಷ್ಯರು, ಇತರ ಜೀವಿಗಳು, ಸಸ್ಯಗಳು, ಸೂಕ್ಷ್ಮಾಣು ಜೀವಿ, ಸ್ವತ್ತು ಅಥವಾ ಪರಿಸರಕ್ಕೆ ಹಾನಿಯುಂಟು ಮಾಡುವಂಥ ವಸ್ತು ಅಥವಾ ತಯಾರಿಕೆ;

(ಎಫ್) ಯಾವುದೇ ಕಾರ್ಖಾನೆ ಅಥವಾ ಆವರಣಕ್ಕೆ ಸಂಬಂಧಪಟ್ಟಂತೆ "ಅಧಿಭೋಗದಾರ" ಎಂದರೆ, ಆ ಕಾರ್ಖಾನೆ ಅಥವಾ ಆವರಣದ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿ ಮತ್ತು ಯಾವುದೇ ವಸ್ತುವಿಗೆ ಸಂಬಂಧಪಟ್ಟಂತೆ ಅ ವಸ್ತುವಿನ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಜಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

## ಅಧ್ಯಾಯ II

## ಕೇಂದ್ರ ಸರ್ಕಾರದ ಸಾಮಾನ್ಯ ಅಧಿಕಾರಗಳು

**3. ಪರಿಸರ ಸಂರಕ್ಷಣೆ ಮತ್ತು ಸುಧಾರಣೆಗೆ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರದ ಅಧಿಕಾರಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಕೇಂದ್ರ ಸರ್ಕಾರವು, ಪರಿಸರದ ಗುಣಮಟ್ಟವನ್ನು ಸಂರಕ್ಷಿಸುವ ಮತ್ತು ಸುಧಾರಿಸುವ ಮತ್ತು ಪರಿಸರ ಮಾಲಿನ್ಯವನ್ನು ತಡೆಗಟ್ಟುವ, ನಿಯಂತ್ರಿಸುವ ಮತ್ತು ಉಪಶಮನಗೊಳಿಸುವ ಉದ್ದೇಶಕ್ಕಾಗಿ ಅದು ಅವಶ್ಯ ಅಥವಾ ವಿಹಿತವೆಂದು ಭಾವಿಸುವಂಥ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ವಿಶೇಷವಾಗಿ ಮತ್ತು ಉಪ ಪ್ರಕರಣ (1)ರ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ಕ್ರಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕ್ರಮಗಳನ್ನು ಒಳಗೊಂಡಿರಬಹುದು, ಎಂದರೆ:–

(i) (ಎ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ; ಅಥವಾ

(ಬಿ) ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ

– ರಾಜ್ಯ ಸರ್ಕಾರಗಳು, ಅಧಿಕಾರಿಗಳು ಮತ್ತು ಇತರ ಪ್ರಾಧಿಕಾರಿಗಳ ಕ್ರಮಗಳ ಸಮನ್ವಯ;

(ii) ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು, ನಿಯಂತ್ರಿಸುವುದು ಮತ್ತು ಉಪಶಮನಗೊಳಿಸುವುದಕ್ಕಾಗಿ ರಾಷ್ಟ್ರ–ವ್ಯಾಪಿ ಕಾರ್ಯಕ್ರಮದ ಯೋಜನೆ ಮತ್ತು ಜಾರಿ;

(iii) ಪರಿಸರದ ವಿವಿಧ ಅಂಶಗಳಲ್ಲಿ ಅದರ ಗುಣಮಟ್ಟದ ಮಾನಕಗಳನ್ನು ವಿಧಿಸುವುದು;

(iv) ಯಾವುದೇ ಬಗೆಯ ವಿವಿಧ ಮೂಲಗಳಿಂದ ಪರಿಸರ ಮಾಲಿನ್ಯಕಾರಕಗಳನ್ನು ಹೊರ ಬಿಡುವುದಕ್ಕಾಗಿ ಅಥವಾ ವಿಸರ್ಜಿಸುವುದಕ್ಕಾಗಿ ಮಾನಕಗಳನ್ನು ವಿಧಿಸುವುದು:

ಪರಂತು, ಅಂಥ ಮೂಲಗಳಿಂದ ಪರಿಸರ ಮಾಲಿನ್ಯಕಾರಕಗಳ ಹೊರಬಿಡುವಿಕೆ ಅಥವಾ ವಿಸರ್ಜನೆಯ ಗುಣಮಟ್ಟ ಅಥವಾ ಸಮ್ಮಿಶ್ರಣವನ್ನು ಗಮನದಲ್ಲಿಟ್ಟು ವಿವಿಧ ಮೂಲಗಳಿಂದ

ಹೊರಬಿಡುವಿಕೆ ಅಥವಾ ವಿಸರ್ಜನೆಗಾಗಿ ಬೇರೆ ಬೇರೆ ಮಾನಕಗಳನ್ನು ಈ ಖಂಡದ ಮೇರೆಗೆ ವಿಧಿಸಬಹುದು;

(v) ಯಾವ ಪ್ರದೇಶಗಳಲ್ಲಿ ಯಾವುದೇ ಕೈಗಾರಿಕೆಗಳು, ಕಾರ್ಯಾಚರಣೆಗಳು ಅಥವಾ ಕಾರ್ಯವಿಧಾನಗಳು ಅಥವಾ ಕೈಗಾರಿಕೆಗಳು, ಕಾರ್ಯಾಚರಣೆಗಳು ಅಥವಾ ಕಾರ್ಯವಿಧಾನಗಳ ವರ್ಗವನ್ನು ನಡೆಸತಕ್ಕದ್ದಲ್ಲವೋ ಅಥವಾ ಕೆಲವು ಸಂರಕ್ಷಣಾ ಕ್ರಮಗಳಿಗೊಳಪಟ್ಟು ನಡೆಸತಕ್ಕದ್ದೋ ಆ ಪ್ರದೇಶಗಳ ನಿರ್ಬಂಧ;

(vi) ಪರಿಸರ ಮಾಲಿನ್ಯ ಉಂಟುಮಾಡಬಹುದಾದಂಥ ಅಪಘಾತಗಳನ್ನು ತಡೆಗಟ್ಟುವುದಕ್ಕೆ ಪ್ರಕ್ರಿಯೆಗಳು ಮತ್ತು ಸುರಕ್ಷತಾ ಕ್ರಮಗಳನ್ನು ಮತ್ತು ಅಂಥ ಅಪಘಾತಗಳಿಗೆ ಪರಿಹಾರಕ ಕ್ರಮಗಳನ್ನು ವಿಧಿಸುವುದು;

(vii) ಅಪಾಯಕಾರಿ ವಸ್ತುಗಳ ನಿರ್ವಹಣೆಗೆ ಪ್ರಕ್ರಿಯೆಗಳು ಮತ್ತು ಸಂರಕ್ಷಣಾ ಕ್ರಮಗಳನ್ನು ವಿಧಿಸುವುದು.

(viii) ಪರಿಸರ ಮಾಲಿನ್ಯವನ್ನುಂಟುಮಾಡುವ ಸಂಭವವಿರುವಂಥ ತಯಾರಿಕಾ ಕಾರ್ಯವಿಧಾನಗಳು, ಸಾಮಗ್ರಿಗಳು ಮತ್ತು ವಸ್ತುಗಳನ್ನು ಪರಿಶೀಲಿಸುವುದು;

(ix) ಪರಿಸರ ಮಾಲಿನ್ಯದ ಸಮಸ್ಯೆಗಳಿಗೆ ಸಂಬಂಧಿಸಿದ ತನಿಖೆಗಳು ಮತ್ತು ಸಂಶೋಧನೆಯನ್ನು ನಡೆಸುವುದು ಮತ್ತು ಪ್ರಾಯೋಜಿಸುವುದು;

(x) ಯಾವುದೇ ಆವರಣ, ಸ್ಥಿರಯಂತ್ರ, ಉಪಕರಣ, ಯಂತ್ರಸಾಮಗ್ರಿ, ಉತ್ಪಾದನಾ ಅಥವಾ ಇತರ ಕಾರ್ಯವಿಧಾನಗಳು, ಸಾಮಗ್ರಿಗಳು ಅಥವಾ ವಸ್ತುಗಳನ್ನು ಪರಿಶೀಲಿಸುವುದು ಮತ್ತು ಪರಿಸರ ಮಾಲಿನ್ಯವನ್ನು ತಡೆಗಟ್ಟಲು, ನಿಯಂತ್ರಿಸಲು ಮತ್ತು ಉಪಶಮನಗೊಳಿಸಲು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅವಶ್ಯವೆಂದು ಅದು ಪರ್ಯಾಲೋಚಿಸುವಂಥ ಪ್ರಾಧಿಕಾರಿಗಳು, ಅಧಿಕಾರಿಗಳು ಅಥವಾ ವ್ಯಕ್ತಿಗಳಿಗೆ ಆದೇಶದ ಮೂಲಕ ಅಂಥ ನಿರ್ದೇಶನಗಳನ್ನು ಕೊಡುವುದು;

(xi) ಈ ಅಧಿನಿಯಮದ ಮೇರೆಗೆ ಪರಿಸರ ಪ್ರಯೋಗ ಶಾಲೆಗಳು ಮತ್ತು ಸಂಸ್ಥೆಗಳಿಗೆ ವಹಿಸಿಕೊಡಲಾದ ಪ್ರಕಾರ್ಯಗಳನ್ನು ನೆರವೇರಿಸಲು ಪರಿಸರ ಪ್ರಯೋಗ ಶಾಲೆಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸುವುದು ಅಥವಾ ಅವುಗಳಿಗೆ ಮನ್ನಣೆ ನೀಡುವುದು;

(xii) ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಸಾರ ಮಾಡುವುದು;

(xiii) ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು, ನಿಯಂತ್ರಿಸುವುದು ಮತ್ತು ಉಪಶಮನಗೊಳಿಸುವುದಕ್ಕೆ ಸಂಬಂಧಿಸಿದ ಕೈಪಿಡಿಗಳು, ಸಂಹಿತೆಗಳು ಅಥವಾ ಮಾರ್ಗದರ್ಶಕಗಳನ್ನು ತಯಾರಿಸುವುದು;

(xiv) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಅವಶ್ಯಕ ಅಥವಾ ವಿಹಿತವೆಂದು ಭಾವಿಸುವಂಥ ಇತರ ವಿಷಯಗಳು.

(3) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಹಾಗೆ ಮಾಡುವುದು ಅವಶ್ಯ ಅಥವಾ ವಿಹಿತವೆಂದು ಅದು ಪರ್ಯಾಲೋಚಿಸಿದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ಆ ಆದೇಶದಲ್ಲಿ ನಮೂದಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ಕೇಂದ್ರ ಸರ್ಕಾರದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (ಪ್ರಕರಣ 5ರ ಮೇರೆಗೆ ನಿರ್ದೇಶನಗಳನ್ನು ಹೊರಡಿಸುವ ಅಧಿಕಾರಗಳನ್ನು ಒಳಗೊಂಡು) ಚಲಾಯಿಸುವ ಮತ್ತು ನೆರವೇರಿಸುವ ಉದ್ದೇಶಕ್ಕಾಗಿ ಮತ್ತು ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಿರುವಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರು ಅಥವಾ ಹೆಸರುಗಳ ಪ್ರಾಧಿಕಾರ ಅಥವಾ ಪ್ರಾಧಿಕಾರಗಳನ್ನು ರಚಿಸಬಹುದು ಮತ್ತು ಕೇಂದ್ರ ಸರ್ಕಾರದ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹಾಗೂ ಅಂಥ ಆದೇಶದ ಉಪಬಂಧಗಳಿಗೊಳಪಟ್ಟು, ಅಂಥ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು ಆ ಆದೇಶದಲ್ಲಿ ಹಾಗೆ ನಮೂದಿಸಿದ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಅಥವಾ ಕ್ರಮಗಳನ್ನು, ಅಂಥ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು ಆ ಅಧಿಕಾರಗಳನ್ನು ಚಲಾಯಿಸಲು ಅಥವಾ ಆ ಪ್ರಕಾರ್ಯಗಳನ್ನು ನೆರವೇರಿಸಲು ಅಥವಾ ಅಂಥ ಕ್ರಮಗಳನ್ನು ತೆಗೆದುಕೊಳ್ಳಲು ಈ ಅಧಿನಿಯಮದ ಮೂಲಕ ಶಕ್ತಗೊಂಡಿದ್ದರೆ ಹೇಗೋ ಹಾಗೆ ಚಲಾಯಿಸಬಹುದು, ನೆರವೇರಿಸಬಹುದು ಅಥವಾ ಕೈಗೊಳ್ಳಬಹುದು.

**4. ಅಧಿಕಾರಿಗಳ ನೇಮಕ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಪ್ರಕರಣ 3ರ ಉಪ ಪ್ರಕರಣ (3)ರ ಉಪಬಂಧಗಳಿಗೆ ಬಾಧಕವಾಗದಂತೆ ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅದು ಸೂಕ್ತವೆಂದು ಯೋಚಿಸುವಂಥ ಪದನಾಮವುಳ್ಳ ಅಧಿಕಾರಿಗಳನ್ನು ನೇಮಕ ಮಾಡಬಹುದು ಮತ್ತು ಅದು ಸೂಕ್ತವೆಂದು ಭಾವಿಸುವಂಥ ಈ ಅಧಿನಿಯಮದ ಮೇರೆಗಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಅವರಿಗೆ ವಹಿಸಬಹುದು.

(2) ಉಪ ಪ್ರಕರಣ (1)ರ ಮೇರೆಗೆ ನೇಮಕಗೊಂಡ ಅಧಿಕಾರಿಗಳು, ಕೇಂದ್ರ ಸರ್ಕಾರದ ಅಥವಾ ಆ ಸರ್ಕಾರವು ಹಾಗೆ ನಿರ್ದೇಶಿಸಿದರೆ, ಪ್ರಕರಣ 3ರ ಉಪ ಪ್ರಕರಣ (3)ರ ಮೇರೆಗೆ ರಚಿತವಾದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು ಯಾವುವಾದರೂ ಇದ್ದಲ್ಲಿ, ಅವುಗಳ ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ಅಧಿಕಾರಿಯ ಸಾಮಾನ್ಯ ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

**5. ನಿರ್ದೇಶನಗಳನ್ನು ಕೊಡಲು ಅಧಿಕಾರ.–** ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆದರೆ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಚಲಾಯಿಸಿ ಮತ್ತು ಪ್ರಕಾರ್ಯಗಳನ್ನು ನೆರವೇರಿಸಿ ಯಾರೇ ವ್ಯಕ್ತಿ, ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರಕ್ಕೆ ಬರಹದಲ್ಲಿ ನಿರ್ದೇಶನಗಳನ್ನು ಕೊಡಬಹುದು ಮತ್ತು ಅಂಥ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ, ಈ ಪ್ರಕರಣದ ಮೇರೆಗೆ ನಿರ್ದೇಶನಗಳನ್ನು ಕೊಡುವ ಅಧಿಕಾರವು,–

(ಎ) ಯಾವುದೇ ಕೈಗಾರಿಕೆ, ಕಾರ್ಯಾಚರಣೆಗೆ ಅಥವಾ ಕಾರ್ಯವಿಧಾನಗಳನ್ನು ಮುಚ್ಚುವುದು, ನಿಷೇಧಿಸುವುದು ಅಥವಾ ನಿಯಮಿಸುವುದು;

(ಬಿ) ವಿದ್ಯುಚ್ಛಕ್ತಿ ಅಥವಾ ನೀರಿನ ಸರಬರಾಜು ಅಥವಾ ಯಾವುದೇ ಇತರ ಸೇವೆಯನ್ನು ನಿಲ್ಲಿಸುವುದು ಅಥವಾ ವಿನಿಯಮಿಸುವುದು

– ಇವುಗಳನ್ನು ನಿರ್ದೇಶಿಸುವ ಅಧಿಕಾರಗಳನ್ನು ಒಳಗೊಳ್ಳುತ್ತದೆ ಎಂದು ಈ ಮೂಲಕ ಘೋಷಿಸಲಾಗಿದೆ.

**5ಎ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಾರಂಭದಂದು ಅಥವಾ ಅದರ ನಂತರ ಪ್ರಕರಣ 5ರ ಮೇರೆಗೆ ಯಾವುದೇ ನಿರ್ದೇಶನಗಳು, ವಿವಾದಗಳಿಂದ ಯಾರೇ ವ್ಯಕ್ತಿಯು ಬಾಧಿತನಾಗಿದ್ದರೆ, ಅವನು ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಪ್ರಕರಣ 3ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

**6. ಪರಿಸರ ಮಾಲಿನ್ಯವನ್ನು ವಿನಿಯಮಿಸುವ ನಿಯಮಗಳು.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರಕರಣ 3ರಲ್ಲಿ ಉಲ್ಲೇಖಿಸಿರುವ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:–

(ಎ) ವಿವಿಧ ಪ್ರದೇಶ ಅಥವಾ ಉದ್ದೇಶಗಳಿಗಾಗಿ ವಾಯು, ನೀರು ಮತ್ತು ಮಣ್ಣಿನ ಗುಣಮಟ್ಟದ ಮಾನಕಗಳು;

(ಬಿ) ವಿವಿಧ ಪ್ರದೇಶಗಳಿಗೆ ಪರಿಸರ ಮಾಲಿನ್ಯಕಾರಕಗಳು (ಶಬ್ದವನ್ನೂ ಒಳಗೊಂಡು) ಸಾಂದ್ರತೆಯು ಅನುಮತಿಸಬಹುದಾದ ಗರಿಷ್ಠ ಮಿತಿಗಳು;

(ಸಿ) ಅಪಾಯಕಾರಿ ವಸ್ತುಗಳ ನಿರ್ವಹಣೆಗಾಗಿನ ಪ್ರಕ್ರಿಯೆಗಳು ಮತ್ತು ಸುರಕ್ಷಾ ಕ್ರಮಗಳು;

(ಡಿ) ವಿವಿಧ ಪ್ರದೇಶಗಳಲ್ಲಿ ಅಪಾಯಕಾರಿ ವಸ್ತುಗಳ ನಿರ್ವಹಣೆಯ ಮೇಲೆ ನಿಷೇಧ ಮತ್ತು ನಿರ್ಬಂಧಗಳು;

(ಇ) ವಿವಿಧ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ಕಾರ್ಯವಿಧಾನಗಳನ್ನು ಮತ್ತು ಕಾರ್ಯಾಚರಣೆಗಳನ್ನು ನಡೆಸಿಕೊಂಡು ಹೋಗುವುದರ ಮೇಲೆ ನಿಷೇಧ ಮತ್ತು ನಿರ್ಬಂಧಗಳು;

(ಎಫ್) ಪರಿಸರ ಮಾಲಿನ್ಯ ಉಂಟುಮಾಡಬಹುದಾದ ಅಪಘಾತಗಳನ್ನು ತಡೆಗಟ್ಟುವುದಕ್ಕೆ ಮತ್ತು ಅಂಥ ಅಪಘಾತಗಳಿಗಾಗಿ ಪರಿಹಾರ ಕ್ರಮಗಳನ್ನು ಒದಗಿಸುವುದಕ್ಕೆ ಪ್ರಕ್ರಿಯೆಗಳು ಮತ್ತು ಸುರಕ್ಷಾ ಕ್ರಮಗಳು.

## ಅಧ್ಯಾಯ III

## ಪರಿಸರ ಮಾಲಿನ್ಯ ತಡೆಗಟ್ಟುವಿಕೆ, ನಿಯಂತ್ರಣ ಮತ್ತು ಉಪಶಮನ

**7. ಕೈಗಾರಿಕೆ, ಕಾರ್ಯಾಚರಣೆ ಇತ್ಯಾದಿಗಳನ್ನು ನಡೆಸಿಕೊಂಡು ಹೋಗುತ್ತಿರುವ ವ್ಯಕ್ತಿಗಳು ಮಾನಕಗಳಿಗಿಂತ ಹೆಚ್ಚಾಗಿ ಮಾಲಿನ್ಯಕಾರಕಗಳ ಹೊರಬಿಡುವಿಕೆ ಅಥವಾ ವಿಸರ್ಜನೆಗೆ ಅನುಮತಿಸತಕ್ಕದ್ದಲ್ಲ.–** ಯಾವುದೇ ಕೈಗಾರಿಕೆ, ಕಾರ್ಯಾಚರಣೆ ಅಥವಾ ಕಾರ್ಯವಿಧಾನವನ್ನು ನಡೆಸಿಕೊಂಡು ಹೋಗುತ್ತಿರುವ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ಮಾನಕಗಳಿಗಿಂತ ಹೆಚ್ಚಾಗಿ

ಯಾವುದೇ ಮಾಲಿನ್ಯಕಾರಕವನ್ನು ವಿಸರ್ಜಿಸತಕ್ಕದ್ದಲ್ಲ ಅಥವಾ ಹೊರಬಿಡತಕ್ಕದ್ದಲ್ಲ ಅಥವಾ ಹಾಗೆ ವಿಸರ್ಜಿಸಲು ಅಥವಾ ಹೊರಬಿಡಲು ಅನುಮತಿಸತಕ್ಕದ್ದಲ್ಲ.

**8. ಅಪಾಯಕಾರಿ ವಸ್ತುಗಳನ್ನು ನಿರ್ವಹಿಸುವ ವ್ಯಕ್ತಿಗಳು ಪ್ರಕ್ರಿಯಾ ಸುರಕ್ಷಾ ಕ್ರಮಗಳನ್ನು ಪಾಲಿಸತಕ್ಕದ್ದು.–** ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ಪ್ರಕ್ರಿಯೆಗೆ ಅನುಸಾರವಾಗಿಯಲ್ಲದೆ ಮತ್ತು ಅಂಥ ಸುರಕ್ಷಾ ಕ್ರಮಗಳನ್ನು ಪಾಲನೆ ಮಾಡಿದ ತರುವಾಯವಲ್ಲದೆ ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸತಕ್ಕದ್ದಲ್ಲ ಅಥವಾ ನಿರ್ವಹಿಸುವಂತೆ ಮಾಡತಕ್ಕದ್ದಲ್ಲ.

**9. ಕೆಲವು ಸಂದರ್ಭಗಳಲ್ಲಿ ಪ್ರಾಧಿಕಾರಗಳಿಗೆ ಮತ್ತು ಏಜೆನ್ಸಿಗಳಿಗೆ ಮಾಹಿತಿಯನ್ನು ಒದಗಿಸುವುದು.–** ಯಾವುದೇ ಅಪಘಾತ ಅಥವಾ ಇತರ ಅನಿರೀಕ್ಷಿತ ಕಾರ್ಯ ಅಥವಾ ಘಟನೆಯಿಂದಾಗಿ ನಿಯಮಿಸಲಾದ ಮಾನಕಗಳಿಗಿಂತ ಹೆಚ್ಚಾಗಿ ಯಾವುದೇ ಪರಿಸರದ ಮಾಲಿನ್ಯಕಾರಕದ ವಿಸರ್ಜನೆಯು ಸಂಭವಿಸುವಲ್ಲಿ ಅಥವಾ ಸಂಭವಿಸುವುದೆಂದು ಶಂಕಿಸಲಾಗುವಲ್ಲಿ ಅಂಥ ವಿಸರ್ಜನೆಗೆ ಹೊಣೆಗಾರನಾದ ವ್ಯಕ್ತಿಯು ಮತ್ತು ಅಂಥ ವಿಸರ್ಜನೆಯು ಸಂಭವಿಸುವ ಅಥವಾ ಸಂಭವಿಸುವುದೆಂದು ಶಂಕಿಸಲಾಗುವ ಸ್ಥಳದ ಪ್ರಭಾರವನ್ನು ಹೊಂದಿರುವ ವ್ಯಕ್ತಿಯು, ಅಂಥ ವಿಸರ್ಜನೆಯ ಪರಿಣಾಮದಿಂದ ಉಂಟಾದ ಪರಿಸರ ಮಾಲಿನ್ಯವನ್ನು ತಡೆಗಟ್ಟತಕ್ಕದ್ದು ಅಥವಾ ಕಡಿಮೆ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಪ್ರಾಧಿಕಾರಿಗಳಿಗೆ ಅಥವಾ ಏಜೆನ್ಸಿಗಳಿಗೆ ಕೂಡಲೇ,–

(ಎ) ಅಂಥ ಸಂಭವಿಸುವಿಕೆಯ ಅಥವಾ ಅಂಥ ಸಂಭವಿಸುವಿಕೆಯ ಶಂಕೆಯ ಸಂಗತಿಯನ್ನು ಸಹ ತಿಳಿಸತಕ್ಕದ್ದು; ಮತ್ತು

(ಬಿ) ಹಾಗೆ ಕೋರಿದಾಗ ಎಲ್ಲ ಸಹಾಯವನ್ನು ಕೊಡಲು ಬದ್ಧನಾಗಿರತಕ್ಕದ್ದು.

(2) ಉಪ ಪ್ರಕರಣ (1)ರ ಮೇರೆಗಿನ ಸೂಚನೆಯ ಮೂಲಕವೇ ಆಗಲಿ ಅಥವಾ ಅನ್ಯಥಾ ಆಗಲಿ ಆ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವರೂಪದ ಯಾವುದೇ ಸಂಭವಿಸುವಿಕೆಯ ಅಥವಾ ಸಂಭವಿಸುವಿಕೆಯ ಶಂಕೆಯ ಸಂಗತಿಗೆ ಸಂಬಂಧಿಸಿದ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಉಪ ಪ್ರಕರಣ (1)ರಲ್ಲಿ ಉಲ್ಲೇಖಿತವಾದಂಥ ಪ್ರಾಧಿಕಾರಿಗಳು ಅಥವಾ ಏಜೆನ್ಸಿಗಳು ಆ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಅವಶ್ಯವಾಗಿರುವಂಥ ಪರಿಹಾರ ಕ್ರಮಗಳನ್ನು ಕಾರ್ಯಸಾಧ್ಯವಾದಷ್ಟು ಬೇಗನೆ ತೆಗೆದುಕೊಳ್ಳುವಂತೆ ಮಾಡತಕ್ಕದ್ದು.

(3) ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಿದ ಪರಿಹಾರ ಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಾಧಿಕಾರವು ಅಥವಾ ಏಜೆನ್ಸಿಯು ವಹಿಸಿದ ವೆಚ್ಚಗಳಾವುದಾದರೂ ಇದ್ದರೆ, ಅವುಗಳನ್ನು ಆ ವೆಚ್ಚಗಳಿಗಾಗಿ

ತಗಾದೆ ಮಾಡಿದ ದಿನಾಂಕದಿಂದ ಅದನ್ನು ಸಂದಾಯ ಮಾಡುವವರೆಗೆ (ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಸೂಕ್ತ ದರದಲ್ಲಿ) ಬಡ್ಡಿ ಸಮೇತವಾಗಿ ಅಂಥ ಪ್ರಾಧಿಕಾರಿಯು ಅಥವಾ ಏಜೆನ್ಸಿಯು ಸಂಬಂಧಪಟ್ಟ ವ್ಯಕ್ತಿಯಿಂದ ಭೂ ಕಂದಾಯದ ಅಥವಾ ಸರ್ಕಾರಿ ತಗಾದೆಯ ಬಾಕಿಗಳಂತೆ ವಸೂಲು ಮಾಡಬಹುದು.

**10. ಪ್ರವೇಶ ಮತ್ತು ಪರಿಶೀಲನಾ ಅಧಿಕಾರಗಳು.–** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು ಕೇಂದ್ರ ಸರ್ಕಾರದಿಂದ ಶಕ್ತಗೊಳಿಸಲಾಗಿರುವ ಯಾರೇ ವ್ಯಕ್ತಿಯು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸಹಾಯದೊಂದಿಗೆ ಎಲ್ಲಾ ಯುಕ್ತ ಕಾಲಗಳಲ್ಲಿ ಯಾವುದೇ ಸ್ಥಳವನ್ನು,–

(ಎ) ಅವನಿಗೆ ವಹಿಸಲಾಗಿರುವ ಕೇಂದ್ರ ಸರ್ಕಾರದ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ;

(ಬಿ) ಯಾವುದೇ ಅಂಥ ಪ್ರಕಾರ್ಯಗಳನ್ನು ನೆರವೇರಿಸಬೇಕೇ ಮತ್ತು ಹಾಗಿದ್ದರೆ ಯಾವ ರೀತಿಯಲ್ಲಿ ನೆರವೇರಿಸಬೇಕೆಂಬುದನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಯಾವುದೇ ಉಪಬಂಧಗಳನ್ನು ಅಥವಾ ಈ ಅಧಿನಿಯಮದ ಮೇರೆಗೆ ಜಾರಿಗೊಳಿಸಲಾದ, ಮಾಡಲಾದ, ಕೊಟ್ಟಿರುವ ಅಥವಾ ಮಂಜೂರು ಮಾಡಲಾದ, ಯಾವುದೇ ನೋಟೀಸು, ಆದೇಶ, ನಿರ್ದೇಶನ ಅಥವಾ ಅಧಿಕೃತಗೊಳಿಸುವಿಕೆಯನ್ನು ಪಾಲಿಸಲಾಗುತ್ತಿದೆಯೇ ಅಥವಾ ಪಾಲಿಸಲಾಗಿದೆಯೇ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ;

(ಸಿ) ಯಾವುದೇ ಉಪಕರಣ, ಕೈಗಾರಿಕಾ ಸ್ಥಿರಯಂತ್ರ, ದಾಖಲೆ, ರಿಜಿಸ್ಟರು, ದಸ್ತಾವೇಜು ಅಥವಾ ಯಾವುದೇ ಇತರ ಭೌತಿಕ ವಸ್ತುವನ್ನು ಪರೀಕ್ಷಿಸುವ ಮತ್ತು ಉಪಪರೀಕ್ಷಿಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗಿನ ಅಪರಾಧವನ್ನು ಯಾವ ಕಟ್ಟಡದಲ್ಲಿ ಮಾಡಲಾಗಿದೆ ಎಂದು ಅಥವಾ ಮಾಡಲಾಗುತ್ತಿದೆಯೆಂದು ಅಥವಾ ಮಾಡಲಾಗುವುದರಲ್ಲಿದೆ ಎಂದು ನಂಬಲು ಅವನಿಗೆ ಕಾರಣವಿದೆಯೋ ಅಂಥ ಯಾವುದೇ ಕಟ್ಟಡದ ಶೋಧನೆಯನ್ನು ನೆಡೆಸುವುದಕ್ಕಾಗಿ ಮತ್ತು ಯಾವುದೇ ಅಂಥ ಉಪಕರಣ, ಕೈಗಾರಿಕಾ ಸ್ಥಿರಯಂತ್ರ, ದಾಖಲೆ, ರಿಜಿಸ್ಟರು, ದಸ್ತಾವೇಜು ಅಥವಾ ಇತರ ಭೌತಿಕ ವಸ್ತುವನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೇರೆಗೆ ದಂಡನೀಯವಾದ ಅಪರಾಧ ಮಾಡುವಿಕೆಯ ಸಾಕ್ಷ್ಯವನ್ನು ಅದು ಒದಗಿಸಬಹುದೆಂದು ಅಥವಾ ಅಂಥ ಅಭಿಗ್ರಹಣವು ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಅವಶ್ಯವೆಂದು ನಂಬಲು ಅವನಿಗೆ ಕಾರಣಗಳಿದ್ದರೆ ಅಭಿಗ್ರಹಿಸುವುದಕ್ಕಾಗಿ ಪ್ರವೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಯಾವುದೇ ಕೈಗಾರಿಕೆ, ಕಾರ್ಯಾಚರಣೆ ಅಥವಾ ಕಾರ್ಯವಿಧಾನವನ್ನು ನಡೆಸುತ್ತಿರುವ ಯಾವುದೇ ಅಪಾಯಕಾರಿ ವಸ್ತುವನ್ನು ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಉಪ ಪ್ರಕರಣ (1)ರ ಮೇರೆಗೆ ಕೇಂದ್ರ ಸರ್ಕಾರದಿಂದ ಶಕ್ತಗೊಳಿಸಲಾದ ವ್ಯಕ್ತಿಗೆ ಆ ಉಪಪ್ರಕರಣದ ಮೇರೆಗಿನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಎಲ್ಲಾ ಸಹಾಯವನ್ನು ಕೊಡಲು ಬದ್ಧನಾಗಿರತಕ್ಕದ್ದು ಮತ್ತು ಅವನು ಯಾವುದೇ ಯುಕ್ತ ಕಾರಣ ಅಥವಾ ನೆಪ ಇಲ್ಲದೆ ಹಾಗೆ ಮಾಡಲು ತಪ್ಪಿದರೆ ಅವನು ಈ ಅಧಿನಿಯಮದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಉಪ ಪ್ರಕರಣ (1)ರ ಮೇರೆಗೆ ಕೇಂದ್ರ ಸರ್ಕಾರವು ಶಕ್ತಗೊಳಿಸಿದ ಯಾರೇ ವ್ಯಕ್ತಿಗೆ ಅವನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಉದ್ದೇಶಪೂರ್ವಕವಾಗಿ ವಿಳಂಬ ಅಥವಾ ಅಡಚಣೆ ಉಂಟು ಮಾಡಿದರೆ ಅವನು ಈ ಅಧಿನಿಯಮದ ಮೇರೆಗಿನ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(4) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯ* ಅಥವಾ ಆ ಸಂಹಿತೆಯು ಜಾರಿಯಲ್ಲಿಲ್ಲದಂಥ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಅಥವಾ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಸಂವಾದಿ ಕಾನೂನಿನ ಉಪಬಂಧಗಳು ಈ ಪ್ರಕರಣದ ಮೇರೆಗಿನ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಸದರಿ ಸಂಹಿತೆಯ ಪ್ರಕರಣ 94ರ ಮೇರೆಗೆ ಅಥವಾ ಸಂದರ್ಭಾನುಸಾರ ಸದರಿ ಕಾನೂನಿನ ಸಂವಾದಿ ಉಪಬಂಧದ ಮೇರೆಗೆ ಹೊರಡಿಸಲಾದ ವಾರಂಟಿನ ಅಧಿಕೃತತೆಯ ಮೇರೆಗೆ ಮಾಡಲಾಗುವ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅವು ಅನ್ವಯಿಸುವಂತೆಯೇ ಅನ್ವಯವಾಗತಕ್ಕದ್ದು.

**11. ಮಾದರಿ ತೆಗೆದುಕೊಳ್ಳುವ ಅಧಿಕಾರ ಮತ್ತು ಅದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಪ್ರಕ್ರಿಯೆ.–** (1) ಕೇಂದ್ರ ಸರ್ಕಾರವು ಅಥವಾ ಅದು ಈ ಬಗ್ಗೆ ಶಕ್ತಗೊಳಿಸಿದ ಯಾರೇ ಅಧಿಕಾರಿಯು ವಿಶ್ಲೇಷಣೆ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಯಾವುದೇ ಕಾರ್ಖಾನೆ, ಆವರಣಗಳು ಅಥವಾ ಇತರ ಸ್ಥಳಗಳಿಂದ ವಾಯು, ನೀರು, ಮಣ್ಣು ಮತ್ತು ಇತರ ಪದಾರ್ಥದ ಮಾದರಿಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು;

---

* ಅಧಿಸೂಚನೆ ಸಂಖ್ಯೆ ಎಸ್.ಓ 3912 (ಇ) ದಿನಾಂಕ: 30ನೇ ಅಕ್ಟೋಬರ್ 2019 ನೋಡಿ, ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

(2) ಉಪ ಪ್ರಕರಣ (1)ರ ಮೇರೆಗೆ ತೆಗೆದುಕೊಳ್ಳಲಾದ ಮಾದರಿಯ ಯಾವುದೇ ವಿಶ್ಲೇಷಣೆಯ ಫಲಿತಾಂಶವು ಉಪ ಪ್ರಕರಣ (3) ಮತ್ತು (4)ರ ಉಪಬಂಧಗಳನ್ನು ಪಾಲಿಸಿರುವ ಹೊರತು, ಯಾವುದೇ ಕಾನೂನು ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗತಕ್ಕದ್ದಲ್ಲ.

(3) ಉಪ ಪ್ರಕರಣ (4)ರ ಉಪಬಂಧಗಳಿಗೆ ಒಳಪಟ್ಟು, ಉಪ ಪ್ರಕರಣ (1)ರ ಮೇರೆಗೆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು,–

(ಎ) ಆ ಸ್ಥಳದ ಅಧಿಭೋಗದಾರ ಅಥವಾ ಅವನ ಏಜೆಂಟ್ ಅಥವಾ ಅದರ ಪ್ರಭಾರವನ್ನು ಹೊಂದಿರುವ ವ್ಯಕ್ತಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಅದನ್ನು ಹಾಗೆ ವಿಶ್ಲೇಷಿಸಿಕೊಳ್ಳುವ ತನ್ನ ಉದ್ದೇಶದ ನೋಟೀಸನ್ನು ಆ ಕೂಡಲೇ ಜಾರಿ ಮಾಡತಕ್ಕದ್ದು;

(ಬಿ) ಅಧಿಭೋಗದಾರ ಅಥವಾ ಅವನ ಏಜೆಂಟ್ ಅಥವಾ ವ್ಯಕ್ತಿಯ ಸಮ್ಮುಖದಲ್ಲಿ ವಿಶ್ಲೇಷಣೆಗಾಗಿ ಮಾದರಿಯನ್ನು ಸಂಗ್ರಹಿಸತಕ್ಕದ್ದು;

(ಸಿ) ಆ ಮಾದರಿಯನ್ನು ಪಾತ್ರೆ ಅಥವಾ ಪಾತ್ರೆಗಳಲ್ಲಿ ಇಡುವಂತೆ ಮಾಡತಕ್ಕದ್ದು, ಅವುಗಳಿಗೆ ಗುರುತುಮಾಡತಕ್ಕದ್ದು ಮತ್ತು ಮೊಹರು ಹಾಕತಕ್ಕದ್ದು ಮತ್ತು ಆ ಮಾದರಿಯನ್ನು ತೆಗೆದುಕೊಂಡಿರುವ ವ್ಯಕ್ತಿ ಮತ್ತು ಅಧಿಭೋಗದಾರ ಅಥವಾ ಅವನ ಏಜೆಂಟ್ ಅಥವಾ ವ್ಯಕ್ತಿ ಇವರಿಬ್ಬರು ಸಹ ರುಜು ಹಾಕತಕ್ಕದ್ದು;

(ಡಿ) ಪ್ರಕರಣ 12ರ ಮೇರೆಗೆ ಕೇಂದ್ರ ಸರ್ಕಾರದಿಂದ ಸ್ಥಾಪಿತವಾದ ಅಥವಾ ಮಾನ್ಯತೆ ಪಡೆದ ಪ್ರಯೋಗಶಾಲೆಗೆ ಆ ಸೀಸೆ ಅಥವಾ ಸೀಸೆಗಳನ್ನು ವಿಳಂಬವಿಲ್ಲದೆ ಕಳುಹಿಸತಕ್ಕದ್ದು.

(4) ಉಪ ಪ್ರಕರಣ (1)ರ ಮೇರೆಗೆ ವಿಶ್ಲೇಷಣೆಗಾಗಿ ಮಾದರಿಯನ್ನು ತೆಗೆದುಕೊಂಡಿರುವಾಗ ಮತ್ತು ಆ ಮಾದರಿಯನ್ನು ತೆಗೆದುಕೊಂಡಿರುವ ವ್ಯಕ್ತಿಯು, ಅಧಿಭೋಗದಾರ ಅಥವಾ ಅವನ ಏಜೆಂಟ್ ಅಥವಾ ವ್ಯಕ್ತಿಗೆ ಉಪ ಪ್ರಕರಣ (3)ರ ಖಂಡ (ಎ)ಯ ಮೇರೆಗೆ ನೋಟೀಸನ್ನು ಜಾರಿಗೊಳಿಸಿರುವಾಗ,–

(ಎ) ಅಧಿಭೋಗದಾರ, ಅವನ ಏಜೆಂಟ್ ಅಥವಾ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಗೈರುಹಾಜರಾಗಿರುವಲ್ಲಿ ಆ ಮಾದರಿಯನ್ನು ತೆಗೆದುಕೊಂಡಿರುವ ವ್ಯಕ್ತಿಯು ವಿಶ್ಲೇಷಣೆಗಾಗಿ ಸೀಸೆ ಅಥವಾ ಸೀಸೆಗಳಲ್ಲಿ ಇಡಬೇಕಾದ ಮಾದರಿಯನ್ನು ಸಂಗ್ರಹಿಸತಕ್ಕದ್ದು. ಅವುಗಳಿಗೆ ಗುರುತು ಹಾಕತಕ್ಕದ್ದು ಮತ್ತು ಮೊಹರು ಹಾಕತಕ್ಕದ್ದು ಮತ್ತು ಆ ಮಾದರಿಯನ್ನು ತೆಗೆದುಕೊಂಡಿರುವ ವ್ಯಕ್ತಿಯು ರುಜು ಸಹ ಮಾಡತಕ್ಕದ್ದು; ಮತ್ತು

(ಬಿ) ಆ ಮಾದರಿಯನ್ನು ತೆಗೆದುಕೊಳ್ಳುವ ಕಾಲದಲ್ಲಿ ಹಾಜರಿದ್ದ ಅಧಿಭೋಗದಾರ ಅಥವಾ ಅವನ ಏಜೆಂಟ್ ಅಥವಾ ವ್ಯಕ್ತಿಯು ಉಪ ಪ್ರಕರಣ (3)ರ ಖಂಡ (ಸಿ)ಯ ಮೇರೆಗೆ ಅಗತ್ಯಪಡಿಸಲಾದಂತೆ ಆ ಮಾದರಿಯ ಗುರುತು ಹಾಕಿದ ಮತ್ತು ಮೊಹರು ಮಾಡಿದ ಸೀಸೆ ಅಥವಾ ಸೀಸೆಗಳಿಗೆ ರುಜು ಹಾಕಲು ನಿರಾಕರಿಸುವಲ್ಲಿ ಗುರುತು ಮಾಡಿದ

– ಮತ್ತು ಮೊಹರು ಮಾಡಿದ ಆ ಸೀಸೆ ಅಥವಾ ಸೀಸೆಗಳಿಗೆ ಮಾದರಿಗಳನ್ನು ತೆಗೆದುಕೊಳ್ಳುವ ವ್ಯಕ್ತಿಯು ರುಜು ಹಾಕತಕ್ಕದ್ದು ಮತ್ತು ಆ ಮಾದರಿಯನ್ನು ತೆಗೆದುಕೊಂಡಿರುವ ವ್ಯಕ್ತಿಯು ಆ ಸೀಸೆ ಅಥವಾ ಸೀಸೆಗಳನ್ನು ಪ್ರಕರಣ 12ರ ಮೇರೆಗೆ ಸ್ಥಾಪಿತವಾದ ಅಥವಾ ಮಾನ್ಯತೆ ಪಡೆದ ಪ್ರಯೋಗ ಶಾಲೆಗೆ ವಿಶ್ಲೇಷಣೆಗಾಗಿ ವಿಳಂಬವಿಲ್ಲದೆ ಕಳುಹಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಪ್ರಕರಣ 13ರ ಮೇರೆಗೆ ನೇಮಕಗೊಂಡ ಅಥವಾ ಮಾನ್ಯತೆ ಪಡೆದ ಸರ್ಕಾರಿ ವಿಶ್ಲೇಷಕನಿಗೆ, ಬರಹದಲ್ಲಿ ಅಧಿಭೋಗದಾರ ಅಥವಾ ಅವನ ಏಜೆಂಟಿನ ಅಥವಾ ವ್ಯಕ್ತಿಯ ಉದ್ದೇಶಪೂರ್ವಕವಾದ ಗೈರುಹಾಜರಿಯ ಬಗ್ಗೆ ಅಥವಾ ಸಂದರ್ಭಾನುಸಾರ ಆ ಸೀಸೆ ಅಥವಾ ಸೀಸೆಗಳಿಗೆ ರುಜು ಹಾಕಲು ಅವನು ನಿರಾಕರಿಸಿದ ಬಗ್ಗೆ ತಿಳಿಸತಕ್ಕದ್ದು.

**12. ಪರಿಸರ ಪ್ರಯೋಗಶಾಲೆಗಳು.–** (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,–

(ಎ) ಒಂದು ಅಥವಾ ಹೆಚ್ಚು ಪರಿಸರ ಪ್ರಯೋಗಶಾಲೆಗಳನ್ನು ಸ್ಥಾಪಿಸಬಹುದು;

(ಬಿ) ಈ ಅಧಿನಿಯಮದ ಮೇರೆಗೆ ಪರಿಸರ ಪ್ರಯೋಗಶಾಲೆಗೆ ವಹಿಸುವ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ಒಂದು ಅಥವಾ ಹೆಚ್ಚು ಪ್ರಯೋಗಶಾಲೆಗಳನ್ನು ಅಥವಾ ಸಂಸ್ಥೆಗಳನ್ನು ಪರಿಸರ ಪ್ರಯೋಗಶಾಲೆಗಳೆಂದು ಮಾನ್ಯ ಮಾಡಬಹುದು.

(2) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,–

(ಎ) ಆ ಪರಿಸರ ಪ್ರಯೋಗಶಾಲೆಯ ಪ್ರಕಾರ್ಯಗಳು;

(ಬಿ) ವಾಯು, ನೀರು, ಮಣ್ಣು ಅಥವಾ ಇತರ ಪದಾರ್ಥದ ಮಾದರಿಗಳನ್ನು ವಿಶ್ಲೇಷಣೆ ಅಥವಾ ಉಪ ಪರೀಕ್ಷೆಗಳಿಗಾಗಿ ಸದರಿ ಪ್ರಯೋಗಶಾಲೆಗೆ ಒಪ್ಪಿಸುವುದರ ಪ್ರಕ್ರಿಯೆ ಅವುಗಳ ಮೇಲಣ ಪ್ರಯೋಗಶಾಲೆಯ ವರದಿಯ ನಮೂನೆ ಮತ್ತು ಅಂಥ ವರದಿಗಾಗಿ ಸಂದಾಯ ಮಾಡಬೇಕಾದ ಫೀಜುಗಳು;

(ಸಿ) ಪ್ರಯೋಗಶಾಲೆಯ ಪ್ರಕಾರ್ಯಗಳನ್ನು ನೇರವೇರಿಸುವುದಕ್ಕಾಗಿ, ಅದನ್ನು ಸಾಧ್ಯಗೊಳಿಸುವ ಸಲುವಾಗಿ ಅವಶ್ಯ ಅಥವಾ ವಿಹಿತವಾಗಬಹುದಾದಂಥ ಇತರೆ ವಿಷಯಗಳು

–ಇವುಗಳನ್ನು ನಮೂದಿಸಿ ನಿಯಮಗಳನ್ನು ರಚಿಸಬಹುದು.

**13. ಸರ್ಕಾರಿ ವಿಶ್ಲೇಷಕರು.–** ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರಕರಣ 12ರ ಉಪ ಪ್ರಕರಣ (1)ರ ಮೇರೆಗೆ ಸ್ಥಾಪಿತವಾದ ಅಥವಾ ಮಾನ್ಯತೆ ಪಡೆದ ಯಾವುದೇ ಪರಿಸರ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸಿರುವ ವಾಯು, ನೀರು, ಮಣ್ಣು ಅಥವಾ ಇತರ ಪದಾರ್ಥದ ಮಾದರಿಗಳ ವಿಶ್ಲೇಷಣೆಯ ಉದ್ದೇಶಕ್ಕಾಗಿ ತಾನು ಯೋಗ್ಯವೆಂದು ಭಾವಿಸುವ ಮತ್ತು ನಿಯಮಿಸಲಾದ ಅರ್ಹತೆಗಳನ್ನು ಹೊಂದಿರುವಂಥ ವ್ಯಕ್ತಿಗಳನ್ನು ಸರ್ಕಾರಿ ವಿಶ್ಲೇಷಕರೆಂದು ನೇಮಕ ಮಾಡಬಹುದು ಅಥವಾ ಮಾನ್ಯ ಮಾಡಬಹುದು.

**14. ಸರ್ಕಾರಿ ವಿಶ್ಲೇಷಕರ ವರದಿಗಳು.–** ಸರ್ಕಾರಿ ವಿಶ್ಲೇಷಕನು ರುಜು ಮಾಡಿರುವ ವರದಿಯಾಗಿರುವುದಾಗಿ ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಅದರಲ್ಲಿ ನಮೂದಿಸಿರುವ ಸಂಗತಿಗಳ ಸಾಕ್ಷ್ಯವಾಗಿ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಬಳಸಬಹುದು.

**15. ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳು, ಆದೇಶಗಳು ಮತ್ತು ನಿರ್ದೇಶನಗಳ ಉಲ್ಲಂಘನೆಗಾಗಿ ದಂಡನೆ.–** (1) ಯಾರೇ ವ್ಯಕ್ತಿಯಾಗಲಿ, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ಮಾಡಿದ ನಿಯಮಗಳು ಅಥವಾ ಹೊರಡಿಸಿದ ಆದೇಶಗಳು ಅಥವಾ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಅಥವಾ ಉಲ್ಲಂಘಿಸಿದರೆ, ಅವನು ಅಂಥ ಪ್ರತಿಯೊಂದು ತಪ್ಪುವಿಕೆ ಅಥವಾ ಉಲ್ಲಂಘನೆಗೆ ಸಂಬಂಧಿಸಿದಂತೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ತಪ್ಪುವಿಕೆ ಅಥವಾ ಉಲ್ಲಂಘನೆ ಮುಂದುವರಿದ ಸಂದರ್ಭದಲ್ಲಿ ಮೊದಲಿನ ಅಂಥ ತಪ್ಪುವಿಕೆ ಅಥವಾ ಉಲ್ಲಂಘನೆಯ ಬಗ್ಗೆ ಅಪರಾಧ ನಿರ್ಣಯವಾದ ತರುವಾಯ ಅಂಥ ತಪ್ಪುವಿಕೆ ಅಥವಾ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿವಸಕ್ಕಾಗಿ ಐದುಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕದ್ದು.

(2) ಉಪ ಪ್ರಕರಣ (1)ರಲ್ಲಿ ಉಲ್ಲೇಖಿತವಾದ ತಪ್ಪುವಿಕೆ ಅಥವಾ ಉಲ್ಲಂಘನೆಯ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಒಂದು ವರ್ಷದ ಅವಧಿಯನ್ನು ಮೀರಿ ಮುಂದುವರಿದರೆ

ಅಪರಾಧಿಯು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**16. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ, ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿ ಇರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅಂಥ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿರುವಂಥ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ ಪ್ರಕರಣ (1)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಹೇಳಬಹುದೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಆ ಫರ್ಮಿನ ಪಾಲುದಾರ.

**17. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಯಾವುದೇ ಸರ್ಕಾರಿ ಇಲಾಖೆಯು ಮಾಡಿರುವಲ್ಲಿ, ಆ ಇಲಾಖೆಯ ಮುಖ್ಯಸ್ಥನನ್ನು ಆ

ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅಂಥ ಇಲಾಖಾ ಮುಖ್ಯಸ್ಥನು ರುಜುವಾತುಪಡಿಸಿದರೆ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರಿ ಇಲಾಖೆಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಆ ಇಲಾಖೆಯ ಮುಖ್ಯಸ್ಥನಲ್ಲದ ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಹೇಳಬಹುದೆಂದು ರುಜುವಾತಾದರೆ, ಅಂಥ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

## ಅಧ್ಯಾಯ IV

### ಸಂಕೀರ್ಣ

**18. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು, ಹೊರಡಿಸಿದ ಆದೇಶಗಳು ಅಥವಾ ನಿರ್ದೇಶನಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ ಅಥವಾ ಸರ್ಕಾರದ ಯಾರೇ ಅಧಿಕಾರಿ ಅಥವಾ ಇತರ ನೌಕರ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಪ್ರಾಧಿಕಾರ ಅಥವಾ ಅಂಥ ಪ್ರಾಧಿಕಾರದ ಯಾರೇ ಸದಸ್ಯ, ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಯಾವುದೇ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**19. ಅಪರಾಧಗಳ ಸಂಜ್ಞೇಯತೆ.–** ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞೇಯತೆಯನ್ನು,–

(ಎ) ಕೇಂದ್ರ ಸರ್ಕಾರ ಅಥವಾ ಈ ಬಗ್ಗೆ ಆ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಯು; ಅಥವಾ

(ಬಿ) ನಿಯಮಿಸಲಾದ ರೀತಿಯಲ್ಲಿ ಕೇಂದ್ರ ಸರ್ಕಾರ ಅಥವಾ ಹಿಂದೆ ಹೇಳಿದಂತೆ ಅಧಿಕೃತಗೊಳಿಸಿದ ಪ್ರಾಧಿಕಾರ ಅಥವಾ ಅಧಿಕಾರಿಗೆ ಆ ಆರೋಪಿತ ಅಪರಾಧದ ಬಗ್ಗೆ ಮತ್ತು ಫಿರ್ಯಾದನ್ನು ಮಾಡಲು ಅವನ ಉದ್ದೇಶದ ಬಗ್ಗೆ ಅರವತ್ತು ದಿವಸಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟಿರುವ ಯಾರೇ ವ್ಯಕ್ತಿಯು

– ಮಾಡಿದ ಫಿರ್ಯಾದಿನ ಮೇಲಲ್ಲದೆ ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

**20. ಮಾಹಿತಿ, ವರದಿಗಳು ಅಥವಾ ವಿವರಪಟ್ಟಿಕೆಗಳು.–** ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಕಾಲಕಾಲಕ್ಕೆ ಯಾವುದೇ ವರದಿಗಳು, ವಿವರಪಟ್ಟಿಕೆಗಳು, ಅಂಕಿಅಂಶಗಳು, ಲೆಕ್ಕಪತ್ರಗಳು ಮತ್ತು ಇತರ ಮಾಹಿತಿಯನ್ನು ಅದಕ್ಕೆ ಅಥವಾ ಯಾರೇ ನಿಯಮಿಸಲಾದ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಗೆ ಒದಗಿಸಲು ಯಾರೇ ವ್ಯಕ್ತಿ, ಅಧಿಕಾರಿ, ರಾಜ್ಯ ಸರ್ಕಾರ ಅಥವಾ ಇತರ ಪ್ರಾಧಿಕಾರವನ್ನು ಅಗತ್ಯಪಡಿಸಬಹುದು ಮತ್ತು ಅಂಥ ವ್ಯಕ್ತಿ, ಅಧಿಕಾರಿ, ರಾಜ್ಯ ಸರ್ಕಾರ ಅಥವಾ ಇತರ ಪ್ರಾಧಿಕಾರವು ಹಾಗೆ ಮಾಡಲು ಬದ್ಧವಾಗಿರತಕ್ಕದ್ದು.

**21. ಪ್ರಕರಣ 3ರ ಮೇರೆಗೆ ರಚಿಸಿದ ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ನಿಯೋಜಿತರು ಲೋಕ ನೌಕರರಾಗಿರತಕ್ಕದ್ದು.–** ಪ್ರಕರಣ 3ರ ಮೇರೆಗೆ ರಚಿಸಿದ ಪ್ರಾಧಿಕಾರ ಯಾವುದಾದರೂ ಇದ್ದರೆ ಅದರ ಎಲ್ಲಾ ಸದಸ್ಯರು ಮತ್ತು ಅಂಥ ಪ್ರಾಧಿಕಾರದ ಎಲ್ಲ ಅಧಿಕಾರಿಗಳು ಹಾಗೂ ಇತರ ನಿಯೋಜಿತರು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಥವಾ ಹೊರಡಿಸಿದ ಆದೇಶಗಳು ಅಥವಾ ನಿರ್ದೇಶನಗಳ ಯಾವುದೇ ಉಪಬಂಧದ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುವುದಾಗಿ ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಂಹಿತೆ (1860ರ 45) ಯ ಪ್ರಕರಣ 21ರ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರಾಗಿರುವುದಾಗಿ ಭಾವಿಸತಕ್ಕದ್ದು.

**22. ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಪ್ರದಾನ ಮಾಡಿದ ಅಥವಾ ಅದರ ಅಥವಾ ಅವನ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಕೇಂದ್ರ ಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ಅಧಿಕಾರಿಯು ಮಾಡಿದ ಯಾವುದೇ ಕಾರ್ಯ, ಕೈಗೊಂಡ ಕ್ರಮ ಅಥವಾ ಹೊರಡಿಸಿದ ಆದೇಶ ಅಥವಾ ನಿರ್ದೇಶನಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**23. ಪ್ರತ್ಯಾಯೋಜಿಸಲು ಅಧಿಕಾರ.–** ಪ್ರಕರಣ 3ರ ಉಪ ಪ್ರಕರಣ (3)ರ ಉಪಬಂಧಗಳಿಗೆ ಬಾಧಕವಾಗದಂತೆ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯನ್ನು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ಅದು ಅವಶ್ಯ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಪ್ರಕರಣ 3ರ ಉಪ ಪ್ರಕರಣ (3)ರ ಮೇರೆಗೆ ಪ್ರಾಧಿಕಾರವನ್ನು ರಚಿಸುವ ಮತ್ತು ಪ್ರಕರಣ 25ರ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರಗಳನ್ನು ಹೊರತುಪಡಿಸಿ ಯಾರೇ ಅಧಿಕಾರಿ, ರಾಜ್ಯ ಸರ್ಕಾರ ಅಥವಾ ಇತರ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

**24. ಇತರ ಕಾನೂನುಗಳ ಪರಿಣಾಮ.–** ಉಪ ಪ್ರಕರಣ 2ರ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳು ಅಥವಾ ಅದರಲ್ಲಿ ಮಾಡಿದ ನಿಯಮಗಳು ಮತ್ತು ಆದೇಶಗಳು, ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಅಧಿನಿಯಮಿತಿಯಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದಾಗ್ಯೂ, ಪರಿಣಾಮವುಳ್ಳವುಗಳಾಗಿರತಕ್ಕದ್ದು.

(2) ಯಾವುದೇ ಕಾರ್ಯ ಅಥವಾ ಲೋಪವು ಈ ಅಧಿನಿಯಮದ ಮೇರೆಗೆ ಮತ್ತು ಯಾವುದೇ ಇತರ ಅಧಿನಿಯಮದ ಮೇರೆಗೆ ಸಹ ದಂಡನೀಯವಾದ ಅಪರಾಧವಾಗುವಲ್ಲಿ, ಆಗ ಅಂಥ ಅಪರಾಧದ ತಪ್ಪಿತಸ್ಥನೆಂದು ಕಂಡುಬಂದ ಅಪರಾಧಿಯು ಆ ಇತರ ಅಧಿನಿಯಮದ ಮೇರೆಗೆ ದಂಡಿತನಾಗಲು ಹೊಣೆಯಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅಲ್ಲ.

**25. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಯಾವ ಮಾನಕಗಳನ್ನು ಮೀರಿ ಪರಿಸರ ಮಾಲಿನ್ಯಕಾರಕಗಳನ್ನು ಪ್ರಕರಣ 7ರ ಮೇರೆಗೆ ವಿಸರ್ಜಿಸತಕ್ಕದ್ದಲ್ಲವೋ ಅಥವಾ ಹೊರಬಿಡತಕ್ಕದ್ದಲ್ಲವೋ ಆ ಮಾನಕಗಳು;

(ಬಿ) ಯಾವ ಪ್ರಕ್ರಿಯೆಯ ಅನುಸರಣೆಯಲ್ಲಿ ಮತ್ತು ಯಾವ ಸುರಕ್ಷಾ ಕ್ರಮಗಳ ಪಾಲನೆಯಲ್ಲಿ ಪ್ರಕರಣ 8ರ ಮೇರೆಗೆ ಅಪಾಯಕಾರಿ ವಸ್ತುಗಳನ್ನು ನಿರ್ವಹಿಸತಕ್ಕದ್ದೋ ಅಥವಾ ನಿರ್ವಹಿಸುವಂತೆ ಮಾಡತಕ್ಕದ್ದೋ ಆ ಪ್ರಕ್ರಿಯೆ ಮತ್ತು ಸಂರಕ್ಷಣಾ ಕ್ರಮಗಳು;

(ಸಿ) ಯಾವ ಪ್ರಾಧಿಕಾರಗಳು ಅಥವಾ ಏಜೆನ್ಸಿಗಳಿಗೆ, ಪ್ರಕರಣ 9ರ ಉಪ ಪ್ರಕರಣ (1)ರ ಮೇರೆಗೆ ನಿಯಮಿಸಿದ ಮಾನಕಗಳಿಗೆ ಮೀರಿ ಯಾವುದೇ ಪರಿಸರ ಮಾಲಿನ್ಯಕಾರಕದ ವಿಸರ್ಜನೆಯ ಸಂಭವಿಸುವಿಕೆ ಅಥವಾ ಸಂಭವಿಸುವ ಶಂಕೆಯ ಸಂಗತಿಯನ್ನು ತಿಳಿಸತಕ್ಕದ್ದೋ ಮತ್ತು ಯಾರಿಗೆ ಎಲ್ಲ ಸಹಾಯವನ್ನು ಸಲ್ಲಿಸಲು ಬದ್ಧರಾಗಿರತಕ್ಕದ್ದೋ ಆ ಪ್ರಾಧಿಕಾರಗಳು ಅಥವಾ ಏಜೆನ್ಸಿಗಳು;

(ಡಿ) ಪ್ರಕರಣ 11ರ ಉಪ ಪ್ರಕರಣ (1)ರ ಮೇರೆಗೆ ವಿಶ್ಲೇಷಣೆಯ ಉದ್ದೇಶಕ್ಕಾಗಿ ಯಾವ ರೀತಿಯಲ್ಲಿ ವಾಯು, ನೀರು, ಮಣ್ಣು ಅಥವಾ ಇತರ ಪದಾರ್ಥದ ಮಾದರಿಗಳನ್ನು ತೆಗೆದುಕೊಳ್ಳತಕ್ಕದ್ದೋ ಆ ರೀತಿ;

(ಇ) ಪ್ರಕರಣ 11ರ ಉಪ ಪ್ರಕರಣ (3)ರ ಮೇರೆಗೆ ಯಾವ ನಮೂನೆಯಲ್ಲಿ ಮಾದರಿಯ ವಿಶ್ಲೇಷಣೆಯಲ್ಲಿ ಹೊಂದುವ ಉದ್ದೇಶದ ನೋಟೀಸನ್ನು ಜಾರಿ ಮಾಡತಕ್ಕದ್ದೋ ಆ ನಮೂನೆ;

(ಎಫ್) ಪರಿಸರ ಪ್ರಯೋಗಶಾಲೆಗಳ ಪ್ರಕಾರ್ಯಗಳು ವಿಶ್ಲೇಷಣೆಗಾಗಿ ಅಥವಾ ಪರೀಕ್ಷೆಗಾಗಿ ವಾಯು, ನೀರು, ಮಣ್ಣು ಅಥವಾ ಇತರ ಪದಾರ್ಥಗಳ ಮಾದರಿಗಳನ್ನು ಅಂಥ ಪ್ರಯೋಗಶಾಲೆಗಳಿಗೆ ಒಪ್ಪಿಸುವುದಕ್ಕಾಗಿನ ಪ್ರಕ್ರಿಯೆ; ಪ್ರಯೋಗಶಾಲೆ ವರದಿಯ ನಮೂನೆ, ಅಂಥ ವರದಿಗಾಗಿ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಪ್ರಕರಣ 12ರ ಉಪ ಪ್ರಕರಣ (2)ರ ಮೇರೆಗೆ ಅವುಗಳ ಪ್ರಕಾರ್ಯಗಳನ್ನು ನಿರ್ವಹಿಸಲು ಅಂಥ ಪ್ರಯೋಗಶಾಲೆಗಳನ್ನು ಸಮರ್ಥಗೊಳಿಸಲು ಇತರ ವಿಷಯಗಳು;

(ಜಿ) ಪ್ರಕರಣ 13ರ ಮೇರೆಗೆ ವಾಯು, ನೀರು, ಮಣ್ಣು ಅಥವಾ ಇತರ ಪದಾರ್ಥಗಳ ಮಾದರಿಗಳ ವಿಶ್ಲೇಷಣೆಯ ಉದ್ದೇಶಕ್ಕಾಗಿ ನೇಮಕಗೊಂಡ ಅಥವಾ ಮನ್ನಣೆ ಪಡೆದ ಸರ್ಕಾರಿ ವಿಶ್ಲೇಷಕನ ಅರ್ಹತೆಗಳು;

(ಎಚ್) ಪ್ರಕರಣ 19ರ ಖಂಡ (ಬಿ)ಯ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅಪರಾಧದ ಮತ್ತು ಫಿರ್ಯಾದನ್ನು ಮಾಡುವ ಉದ್ದೇಶದ ನೋಟೀಸನ್ನು ಕೊಡತಕ್ಕ ರೀತಿ;

(ಐ) ಪ್ರಕರಣ 20ರ ಮೇರೆಗೆ ಯಾವ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ಯಾವುದೇ ವರದಿಗಳು, ವಿವರಪಟ್ಟಿಕೆಗಳು, ಅಂಕಿಅಂಶಗಳು, ಲೆಕ್ಕಪತ್ರಗಳು ಮತ್ತು ಇತರ ಮಾಹಿತಿಯನ್ನು ಒದಗಿಸತಕ್ಕದ್ದೋ ಆ ಪ್ರಾಧಿಕಾರ ಅಥವಾ ಅಧಿಕಾರ;

(ಜೆ) ನಿಯಮಿಸಲು ಅಗತ್ಯಪಡಿಸಿದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**26. ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿ ಇರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.